### ಡೆವಲಪ್‌ಮೆಂಟ್ ಡೈಲಾಗ್‌ನ ಸಮಾರೋಪದಲ್ಲಿ ಡಾ.ಗುರುರಾಜ ದೇಶಪಾಂಡೆ ಅಭಿಮತ

# ವಿವಾದಗಳಿಂದ ಎನ್‌ಜಿಓಗಳು ದೂರ ಉಳಿಯಲಿ

**ಸಂ.ಕ. ಸಮಾಚಾರ ಹುಬ್ಬಳ್ಳಿ**

ಎನ್‌ಜಿಓಗಳು ಪಾರದರ್ಶಕತೆಯಿಂದ ಕಾರ್ಯನಿರ್ವಹಿಸಬೇಕು. ಇದೆಲ್ಲದರ ಆಚೆಗೆ ವಿವಾದಗಳಿಂದ ದೂರ ಉಳಿಯಬೇಕು ಎಂದು ದೇಶಪಾಂಡೆ ಫೌಂಡೇಶನ್‌ನ ಅಧ್ಯಕ್ಷ ಡಾ.ಗುರುರಾಜ ದೇಶಪಾಂಡೆ ಅಭಿಪ್ರಾಯಪಟ್ಟರು.

ಇಲ್ಲಿಯ ಬಿವಿಬಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆಯುತ್ತಿರುವ ದೇಶಪಾಂಡೆ ಫೌಂಡೇಶನ್‌ನ ಡೆವಲಪ್‌ಮೆಂಟ್ ಡೈಲಾಗ್‌ನ ಕೊನೆಯ ದಿನದ ಚರ್ಚೆಯ ಅಂತಿಮ ಸಲಹೆಗಳು ಸಂವಾದದಲ್ಲಿ ಮಾತನಾಡಿದ ಅವರು, ಭಾರತದಲ್ಲಿ ಸಾಕಷ್ಟು ಎನ್‌ಜಿಓಗಳಿವೆ. ಅಸ್ತಿತ್ವಕ್ಕೆ ಬರುವುದಕ್ಕಿಂತ ಪೂರ್ವದಲ್ಲಿ ಇಟ್ಟುಕೊಂಡಿದ್ದ ಧ್ಯೇಯ–ಧೋರಣೆಗಳನ್ನು ಅಸ್ತಿತ್ವಕ್ಕೆ ಬಂದ ಬಳಿಕ ಉಳಿಸಿಕೊಳ್ಳುವಲ್ಲಿ ವಿಫಲವಾಗುತ್ತಿವೆ. ಮೂಲ ಧ್ಯೇಯೋದ್ದೇಶ ಮರೆತು ಲಾಭಾಂಶದತ್ತ ಆಕರ್ಷಿತವಾಗುತ್ತವೆ ಎಂದು ಬೇಸರ ವ್ಯಕ್ತಪಡಿಸಿದರು.

ಎನ್‌ಜಿಓಗಳು ವಿವಾದಾತ್ಮಕ ಕಾರ್ಯ ಚಟುವಟಿಕೆಗಳಿಂದ ದೂರವಿದ್ದು, ಸರಳತೆ ಹಾಗೂ ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಬೇಕು. ಅಂದಾಗ ಮಾತ್ರ ವಿವಾದಗಳಿಂದ ದೂರ ಉಳಿಯಲು ಸಾಧ್ಯ. ಹೀಗಾಗಿ ಇಂತಹ ಎನ್‌ಜಿಓಗಳ ಕಾರ್ಯವೈಖರಿಯಿಂದ ಪಾರದರ್ಶಕತೆ ಹಾಗೂ ಸಾಮಾಜಿಕ ಕಾಳಜಿ, ಕಳಕಳಿಯೊಂದಿಗೆ ಕಾರ್ಯನಿರ್ವಹಿಸುತ್ತಿರುವ ಎನ್‌ಜಿಓಗಳನ್ನು ಸಹ ಅನುಮಾನದಿಂದ ನೋಡುವಂತಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.




**ಹುಬ್ಬಳ್ಳಿಯ ಬಿವಿಬಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆಯುತ್ತಿರುವ ದೇಶಪಾಂಡೆ ಫೌಂಡೇಶನ್‌ನ ಡೆವಲಪ್‌ಮೆಂಟ್ ಡೈಲಾಗ್‌ನ ಕೊನೆಯ ದಿನದ ಚರ್ಚೆಯ ಅಂತಿಮ ಸಲಹೆಗಳು ಸಂವಾದದಲ್ಲಿ ದೇಶಪಾಂಡೆ ಫೌಂಡೇಶನ್‌ನ ಅಧ್ಯಕ್ಷ ಡಾ.ಗುರುರಾಜ ದೇಶಪಾಂಡೆ ಮಾತನಾಡಿದರು.**

ಐಐಸಿಎ ಸಿಇಓ ಡಾ.ಸಮೀರ್ ಶರ್ಮಾ ಮಾತನಾಡಿ, ಎನ್‌ಜಿಓಗಳು ತಳಮಟ್ಟದ ಸಮಸ್ಯೆ ಅರ್ಥೈಯಿಸಿಕೊಳ್ಳಬೇಕು. ಕಾನೂನು ಅಡೆ–ತಡೆ ಅರಿತಿರಬೇಕು. ಸರ್ಕಾರಗಳು ಎನ್‌ಜಿಓಗಳಿಗೆ ಅನುದಾನ ನೀಡುತ್ತವೆ. ಇದರೊಂದಿಗೆ ಅಗತ್ಯ ಲೆಕ್ಕಪತ್ರ ಕೇಳುತ್ತದೆ. ಹೀಗಾಗಿ ಒಟ್ಟಾರೆ ಕಾರ್ಯ ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಕೂಡಿರಬೇಕು. ಅಂದಾಗ ಮಾತ್ರ ಕಾನೂನಿನ ಭಯ ಇರುವುದಿಲ್ಲ ಎಂದರು.

> ಬಹುತೇಕ ಎನ್‌ಜಿಓಗಳು ಮೂಲಕ ಉದ್ದೇಶ ಸಾಫಲ್ಯತೆ ಹಾಗೂ ಸಾಮಾಜಿಕ ಕಾಳಜಿ-ಕಳಕಳಿಯೊಂದಿಗೆ ಅತ್ಯುತ್ತಮ ಕಾರ್ಯ ಮಾಡುತ್ತಿವೆ. ಸಮಾಜದಲ್ಲಿ ಪರಿವರ್ತನೆ ತರಲು ಶ್ರಮಿಸುತ್ತಿವೆ. ಲಾಭಾಂಶದ ನಿರೀಕ್ಷೆ ನೋಟದೊಂದಿಗೆ ಕಾರ್ಯನಿರ್ವಹಿಸುವ ಎನ್‌ಜಿಓಗಳಿಂದ ಪ್ರಾಮಾಣಿಕ ಎನ್‌ಜಿಓಗಳು ಅಪಪ್ರಚಾರಕ್ಕೆ ಒಳಗಾಗುತ್ತಿರುವುದು ನೋವಿನ ಸಂಗತಿ.
>
> **ಡಾ.ಗುರುರಾಜ ದೇಶಪಾಂಡೆ**
> **ದೇಶಪಾಂಡೆ ಫೌಂಡೇಶನ್ ಅಧ್ಯಕ್ಷ**

ಸಿಇಓ ವಿವೇಕ ಪವಾರ ಮಾತನಾಡಿ, ಎನ್‌ಜಿಓಗಳು ಸಾಕಷ್ಟು ಸಮಸ್ಯೆ ಎದುರಿಸುತ್ತಿವೆ. ಅವುಗಳಿಗೆ ಅಗತ್ಯ ಪರಿಹಾರ ಕಂಡುಕೊಳ್ಳಬೇಕು. ಕಾನೂನು ಪರಿಪಾಲನೆ ಮಾಡದಿದ್ದರೆ, ಕಾನೂನಾತ್ಮಕ ಸಮಸ್ಯೆ ಎದುರಿಸಬೇಕಾಗುತ್ತದೆ. ಸಾಮಾಜಿಕ ಕಳಕಳಿಯೊಂದಿಗೆ ಕಾರ್ಯನಿರ್ವಹಿಸುವ ಎನ್‌ಜಿಓಗಳು ಪಾರದರ್ಶಕತೆ ಕಾರ್ಯಕ್ಕೆ ಆದ್ಯತೆ ನೀಡುವುದು ಸೂಕ್ತ ಎಂದು ತಿಳಿಸಿದರು.

# ಎನ್‌ಜಿಓಗಳು ಸಿಎಸ್‌ಆರ್ ಅನುದಾನ ಬಳಸಿಕೊಳ್ಳಲಿ

**ಸಂ.ಕ. ಸಮಾಚಾರ ಹುಬ್ಬಳ್ಳಿ**

ಸಿಎಸ್‌ಆರ್ ಫಂಡ್ ಬಳಕೆ ಮಾಡಿಕೊಳ್ಳುವ ಬಗ್ಗೆ ಹಾಗೂ ಅದರಿಂದಾಗುವ ಸೇವಾ ಕಾರ್ಯದ ಬಗ್ಗೆ ಎನ್‌ಜಿಓಗಳು ಪೂರ್ವ ವರದಿ ತಯಾರಿಸಿಕೊಳ್ಳಬೇಕು. ಅನೇಕ ಬಾರಿ ತಮ್ಮ ಸೇವಾ ವ್ಯಾಪ್ತಿಯ ಹಾಗೂ ಕ್ಷೇತ್ರ ಮೀರಿದ ಯೋಜನೆಗೆ ಕೈ ಹಾಕುವ ಧಾವಂತದಲ್ಲಿರುತ್ತವೆ. ಅದು ಸಾಕಾರಗೊಳ್ಳದೆ ವಿಫಲವಾದ ಉದಾಹರಣೆಗಳು ಹಲವಾರು ಇವೆ ಎಂದು ಶಕ್ತಿ ಸಂಸ್ಥೆಯ ಮ್ಯಾನೇಜಿಂಗ್ ಪಾರ್ಟನರ್ ನಿಖಿಲ್ ಪಂತ್ ಹೇಳಿದರು.

ರವಿವಾರ ಇಲ್ಲಿಯ ವಿದ್ಯಾನಗರದ ಬಿವಿಬಿ ಕಾಲೇಜಿನಲ್ಲಿ ನಡೆದ ದೇಶಪಾಂಡೆ ಫೌಂಡೇಶನ್ ಡೆವಲಪ್‌ಮೆಂಟ್ ಡೈಲಾಗ್ ಕಾರ್ಯಕ್ರಮದಲ್ಲಿ 'ಸಿಎಸ್‌ಆರ್ ಇಂಡಿಯನ್ ಅಜೆಂಡಾ' ಎಂಬ ವಿಷಯ ಕುರಿತ ಸಂವಾದದಲ್ಲಿ ಅವರು ಮಾತನಾಡಿದರು.

ಸಿಎಸ್‌ಆರ್ ಫಂಡ್‌ನ್ನು ಸದುಪಯೋಗಪಡಿಸಿಕೊಳ್ಳುವ ಜತೆಗೆ ಕಂಪನಿಯ ಹಿತ ಕಾಪಾಡುವಲ್ಲಿ ಎನ್‌ಜಿಓಗಳ ಪಾತ್ರ ಪ್ರಮುಖವಾಗಿರುತ್ತದೆ ಎಂದರು.

ಕಾರ್ಪೋರೇಟ್ ಕಂಪನಿ ಜತೆಗೆ ಸೂಕ್ತ ಯೋಜನಾ ವರದಿಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವಾಗ ಮಾಡುವ ತಪ್ಪುಗಳಿಂದಾಗಿ ಹಲವಾರು ಎನ್‌ಜಿಓಗಳು ಸಿಎಸ್‌ಆರ್ ಫಂಡ್ ಪಡೆಯಲು ವಿಫಲವಾಗುತ್ತಿವೆ. ಸಿಎಸ್‌ಆರ್ ಫಂಡ್ ಬಳಸಿಕೊಂಡು ಮಾಡುವ ಸಾಮಾಜಿಕ ಸೇವಾ ಕಾರ್ಯಗಳ ಯೋಜನಾ ವರದಿ ಸ್ಪಷ್ಟ ಹಾಗೂ ನಿಖರ ಮಾಹಿತಿ ಹೊಂದಿರಬೇಕು. ನಿರ್ದಿಷ್ಟ ಗುರಿ ಹಾಗೂ ಸೇವಾ ವ್ಯಾಪ್ತಿಯ ಬಗ್ಗೆ ಸೂಕ್ತ ಯೋಜನಾ ವರದಿ ತಯಾರಿಸುವುದು ಸವಾಲಿನ ಕೆಲಸವಾಗಿರುತ್ತದೆ ಎಂದರು.

ಕಾರ್ಪೋರೇಟ್ ಕಂಪನಿಗಳಿಗೆ ಸಿಎಸ್‌ಆರ್ ಫಂಡ ಬಳಕೆ ಮಾಡಿಕೊಳ್ಳುವಂತೆ ಸರ್ಕಾರಗಳು ಮಾರ್ಗದರ್ಶನ ಮಾಡುತ್ತವೆ. ಆದರೆ ಅದನ್ನು ಬಳಸುವಂತೆ ಒತ್ತಡ ಹೇರುವ ಕೆಲಸ ಮಾಡುವುದಿಲ್ಲ. ಸದ್ಯ ಹಲವಾರು ಕಂಪನಿಗಳು ತಮ್ಮ ಸಿಎಸ್‌ಆರ್ ಫಂಡ್‌ನ್ನು ಬಳಕೆ ಮಾಡಿಕೊಳ್ಳುವಲ್ಲಿ ನಿರ್ಲಕ್ಷ್ಯ ವಹಿಸುತ್ತಿವೆ. ದೇಶದಲ್ಲಿ ಪ್ರತಿವರ್ಷ 15 ಸಾವಿರ ಕೋಟಿ ಸಿಎಸ್‌ಆರ್ ಫಂಡ್ ಬಳಕೆ ಆಗದೇ ಹಾಗೆಯೇ ಉಳಿಯುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾರ್ಪೋರೇಟ್ ಕಂಪನಿಗಳು ಸ್ವಂತ ಕಾಳಜಿ ವಹಿಸುವ ಮೂಲಕ ಸಿಎಸ್‌ಆರ್ ಫಂಡ್‌ನ್ನು ಬಳಕೆ ಮಾಡಿಕೊಳ್ಳುವ ಕೆಲಸ ಮಾಡಬೇಕು. ಅದ–ರಿಂದ ಕಂಪನಿಯ ಅಭಿವೃದ್ಧಿಯ ಜತೆಗೆ ಸೇವಾ ಕಾರ್ಯಗಳು ನಡೆಯಲು ಸಾಧ್ಯವಾಗುತ್ತದೆ. ಪ್ರತಿ ವರ್ಷ ಸಿಎಸ್‌ಆರ್ ಫಂಡ್ ಬಳಕೆ ಮಾಡಿಕೊಳ್ಳಲು ಸಾಧ್ಯವಾಗದೇ ಇದ್ದಾಗ ಆ ಹಣವನ್ನು ಬ್ಯಾಂಕಿನಲ್ಲಿ ಮೂರು ವರ್ಷ ಎಫ್‌ಡಿ ಇಡುವ ಅವಕಾಶ ಪಡೆಯಬಹುದು. ನಂತರ ಬರುವ ದೊಡ್ಡ ಮೊತ್ತವನ್ನು ಅಗತ್ಯ ಸೇವಾ ಕಾರ್ಯಗಳಿಗೆ ಹಾಗೂ ಸುಧಾರಣೆಗಳಿಗೆ ಸಂಪೂರ್ಣ ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.